**(ತೀರ್ಪನ್ನು ಪ್ರತ್ಯೇಕವಾದ ಆದೇಶದ ಮೂಲಕ ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ)**

## ಆದೇಶ

**ಭಾರತೀಯ ನಾಗರೀಕ ಸುರಕ್ಷಾ ಸಂಹಿತೆಯ ಕಲಂ 278(2)** ರಡಿಯಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಪ್ರಯೋಗಿಸುತ್ತ ಆರೋಪಿತನ ವಿರುದ್ಧ ಕಲಂ 138ರ ವರ್ಗಾವಣೀಯ ಲಿಖಿತ ಪತ್ರಗಳ ಅಧಿನಿಯಮದ ಅಡಿಯಲ್ಲಿ ಮಾಡಲಾದ ಆರೋಪವು ಸಾಬೀತಾಗಿದ್ದ ಕಾರಣ, ಸದರಿ ಆರೋಪಗಳಿಗಾಗಿ ಆರೋಪಿತನನ್ನು ದೋಷಿ ಎಂದು ಘೋಷಿಸಿ ಆವರು ಫಿರ್ಯಾದುದಾರರಿಗೆ **ರೂ.1,35,619/-** ಜುಲ್ಮಾನೆ ಹಣವನ್ನು ಪಾವತಿಸುವಂತೆ ಆದೇಶ ಮಾಡಲಾಗಿರುತ್ತದೆ. ದಂಡವನ್ನು ಪಾವತಿಸಲು ಆರೋಪಿತನು ವಿಫಲರಾದಲ್ಲಿ ಆರು ತಿಂಗಳುಗಳ ಕಾಲ ಸಾದಾ ಶಿಕ್ಷೆಯನ್ನು ಅನುಭವಿಸತಕ್ಕದ್ದು.

**ಕಲಂ 395 ರ ಭಾರತೀಯ ನಾಗರೀಕ ಸುರಕ್ಷಾ ಸಂಹಿತೆಯ ಅಡಿಯಲ್ಲಿ** ಆರೋಪಿತನು ಫಿರ್ಯಾದುದಾರರಿಗೆ ಪರಿಹಾರದ ಹಣವನ್ನು **ರೂ.1,32,619/-**ಗಳನ್ನು ಪಾವತಿ ಮಾಡಲು ಆದೇಶ ಮಾಡಲಾಗಿದ್ದು, ಹಾಗೂ ರೂ.3000/- ಹಣವನ್ನು ರಾಜ್ಯ ಸರ್ಕಾರಕ್ಕೆ ಪಾವತಿ ಮಾಡಲು ಆದೇಶ ಮಾಡಲಾಗಿರುತ್ತದೆ.

ಮುಂದುವರೆದು ಆದೇಶದಲ್ಲಿ ಆದೇಶಿಸಿರುವ ಹಣವನ್ನು ಆರೋಪಿತನು ಕಟ್ಟಲು ತಪ್ಪಿದ್ದಲ್ಲಿ ಕಾರವಾಸ ಶಿಕ್ಷೆಯನ್ನು ಅನುಭವಿಸಿದರೂ ಕೂಡ **ಕಲಂ 461 ರ ಭಾರತೀಯ ನಾಗರೀಕ ಸುರಕ್ಷಾ ಸಂಹಿತೆಯ** ಅಡಿಯಲ್ಲಿ ಆರೋಪಿತನು ಫಿರ್ಯಾದುದಾರರಿಗೆ ಕೊಡಬೇಕಾದ ಅಂತಹ ಪರಿಹಾರವನ್ನು ಕೊಡುವಲ್ಲಿ ವಿಮುಕ್ತರಾಗುವುದಿಲ್ಲ.

ಆರೋಪಿತನಿಗೆ ತೀರ್ಪಿನ ದೃಡಿಕೃತ ಪ್ರತಿಯನ್ನು ಉಚಿತವಾಗಿ ನೀಡುವಂತೆ ಕಚೇರಿಗೆ ನಿರ್ದೇಶಿಸಲಾಗಿದೆ.

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ**
**ಕುಮಟಾ**